ಮೊಗಳ್ಳಿ ಗಣೇಶ್

# ಕಥೆಯ ನದಿಯನ್ನು ಅರಿತವರೇ ಜೀವದಾಹಕ್ಕೆ ನೀರೆರೆವವರು

ಕಥೆ ಎಂಬ ಮನುಷ್ಯ ಇದ್ದ. ಅವನೊಬ್ಬ ಅನಾದಿ. ಆಕಾಶದ ಅನಂತವನ್ನು ಆತ ಬೆರಗಾಗಿ ಆದಿಯಿಂದಲೂ ಧ್ಯಾನಿಸುತ್ತಿದ್ದ. ಆ ಬಗ್ಗೆ ವಿಸ್ಮಯ, ಆನಂದ, ಭಯಮಿಶ್ರಿತ ಹಲವು ಭಾವಗಳ ಕಲ್ಪನೆಗಳಲ್ಲಿ ತಾನು ಕಂಡದ್ದನ್ನೆಲ್ಲ ತನ್ನ ಒಳಮನಸ್ಸಿಗೆ ಹೇಳಿಕೊಂಡು ಮತ್ತೆ ಅದನ್ನು ಹಲವರಿಗೆ ನುಡಿಯುತ್ತಿದ್ದ. ಭಾವವನು ನೆನಪಿನ ಕುಲುಮೆಯ ಕಾವಿನಲ್ಲಿ ಕಾಯಿಸಿ ಹದಗೊಳಿಸಿ ಅದನ್ನು ತನ್ನ ಪ್ರತಿರೂಪವಾಗಿ ಕಾಣುತ್ತಿದ್ದ. ತನ್ನ ರೂಪವೇ ಆ ಕಥೆ ಎಂಬ ಮನುಷ್ಯನಿಗೆ ಮೃಗೀಯತೆಯನ್ನು ಮೀರುವ ಪ್ರತಿರೂಪದಂತೆ ಕಂಡಿತು. ಅದನ್ನೆ ಆಚರಣೆಯ ರೂಪದಲ್ಲೂ ಕೋರಿದ. ಅದು ಅವನ ಮೊದಮೊದಲ ಕಥೆಯಾಯಿತು; ಅಸ್ತಿತ್ವದ ಅಭಿವ್ಯಕ್ತಿಯಾಯಿತು; ಸಮುದಾಯದ, ಕುಟುಂಬದ ಸಮಷ್ಟಿ ಸುಪ್ತ ಭಾವದ ವ್ಯಕ್ತ ನಿರ್ದೇಶನವಾಯಿತು. ಮನಸ್ಸು ಮಾತಾಯಿತು; ಮಾತು ಕಥೆಯಾಯಿತು.

ಹೀಗೆ ಆ ಕಥೆ ಎಂಬ ಒಬ್ಬ ಮನುಷ್ಯನಿಗೆ ದೇವರು ಎಂಬ ಇನ್ನೊಬ್ಬ ಕಥಾಜೀವಿಯ ಪರಿಚಯ ತನ್ನಿಂದ ತಾನೇ ಸ್ವಯಂಭೂ ಎಂಬಂತೆ ಸಂಬಂಧವಾಯಿತು. ಕಥೆ ಎಂಬ ಆ ಅನಾದಿ ಮನುಷ್ಯನೂ, ದೇವರು ಎಂಬ ಆ ಅಮೂರ್ತ ಮಾಯಾವಿ ಕಲ್ಪನೆಯ ಮನುಷ್ಯನೂ, ಒಟ್ಟುಗೂಡಿದ ಮೇಲೆ ಭಾಷೆ ಎಂಬ ನಾಗರಿಕತೆ ತನ್ನದನ್ನೆಲ್ಲ ತನಗೆ ತಿಳಿದಂತೆಲ್ಲ ಹೇಳಿಕೊಳ್ಳಲು, ನಿವೇದಿಸಿ ಭಜಿಸಲು, ಮಾನವ ಪಾಡಿನ ನಾಳಿನಾಚೆಯ ದಿಗಂತಗಳನ್ನು ತಲುಪಲು ಕಥೆ ಎಂಬ ಮನುಷ್ಯರು ಲೌಕಿಕವನ್ನೂ ಅಲೌಕಿಕವನ್ನೂ ಸಾಧ್ಯಂತ, ಆತ್ಯಂತಿಕವಾಗಿ ಆಕಾಶದಲ್ಲಿ ನಕ್ಷತ್ರಗಳು ಮೂಡುವಂತೆ ಭೂಮಿಯ ಮೇಲೂ ಕಥೆ ಎಂಬ ಹಲವು ಬಗೆಯ ಕಾಳುಗಳನ್ನು



